# ನಾಲ್ಕು ಜನರ ನಡುವೆ...

**ಶಿಕ್ಷಕರು ಒಂದು ಹಂತದವರೆಗಷ್ಟೇ ಮಕ್ಕಳ ನಡವಳಿಕೆಗಳನ್ನು ತಿದ್ದಬಲ್ಲರು. ಉಳಿದಂತೆ ಮಕ್ಕಳ ರೂಪಿಸುವ ಹೊಣೆಗಾರಿಕೆ ಪೋಷಕರದು, ವಿಶೇಷವಾಗಿ ತಾಯಿಯದೇ ಆಗಿಬಿಡುತ್ತದೆ.**

■ ಸ್ವಯಂಪ್ರಭಾ



ಎಲ್ಲ ಅಮ್ಮಂದಿರು ಮಕ್ಕಳಿಗೆ ಬುದ್ಧಿ ಹೇಳುವಾಗ, ಸಾಮಾನ್ಯವಾಗಿ ಬಳಸುವ ವಾಕ್ಯಗಳು: 'ನಾಲ್ಕು ಜನರು ಸೈ ಅನ್ನುವ ಹಾಗೆ ನೀನೂ ಇರಬೇಕು', 'ಹತ್ತು ಜನರಿಗೆ ಉಪಯೋಗವಾಗುವಂತೆ ಸರಿಯಾಗಿ ಬಾಳುವೆ ಮಾಡುವುದನ್ನು ಕಲಿ', 'ಸರೀಕರ ನಡುವೆ ತಲೆ ಎತ್ತಿ ನಿಲ್ಲುವಂತಿರಬೇಕು', 'ಹತ್ತಕ್ಕೆ ಸರಿಯಾಗಿ ಬಾಳಬೇಕು...' ಪ್ರದೇಶಗಳಿಗೆ ಅನುಗುಣವಾಗಿ ಪದಗಳು ಬದಲಾಗುತ್ತವೆಯೇ ಹೊರತು, ಎಲ್ಲ ಅಮ್ಮಂದಿರೂ ಹೇಳುವ ಇಂತಹ ವಾಕ್ಯಗಳ ಆಶಯ ಒಂದೇ ಆಗಿರುತ್ತದೆ – ಅದು ಜೀವನವನ್ನು ಸಮರ್ಥವಾಗಿ ನಿರ್ವಹಿಸಬೇಕು ಎನ್ನುವುದು. ಎಷ್ಟೋ ಸರ್ತಿ ಅಮ್ಮಂದಿರು ಹೇಳುವ ಈ ಮಾತುಗಳನ್ನು ಪುಟಾಣಿ ಮಕ್ಕಳು ಸುಮ್ಮನೇ ಕೇಳಿಸಿಕೊಳ್ಳುತ್ತಾರೆ. ಆ ಮಾತಿನ ನಿಜವಾದ ಇಂಗಿತ ಏನು ಎಂಬುದು ಅವರಿಗೆ ಅಷ್ಟೇನೂ ಗೊತ್ತಾಗಿರುವುದಿಲ್ಲ. ಆದರೆ ಹತ್ತು ಹನ್ನೆರಡು ವರ್ಷ ದಾಟಿದ ಮಕ್ಕಳು ಅಮ್ಮನ ಈ ಬುದ್ಧಿಮಾತನ್ನು ವಿರೋಧಿಸುವುದೇ ಹೆಚ್ಚು. ಅಮ್ಮನ ಬುದ್ಧಿ ಮಾತು ಕೇಳುತ್ತಿದ್ದಂತೆಯೇ ಮಕ್ಕಳ ಸಿಟ್ಟು ಸರ್ರನೆ ನೆತ್ತಿಗೇರಿ, 'ನಾಲ್ಕು ಜನರು ಸರಿ ಎನ್ನುವ ಹಾಗೆ ಎಂದರೇನು... ನಾನು ನನಗೆ ಬೇಕಾದ ಹಾಗೆ ಇರುತ್ತೇನೆ' ಎಂದು ಕೇಳುತ್ತಾರೆ. ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ, 'ಅಮ್ಮ ನೀನು ಹೇಳುವ ಆ ನಾಲ್ಕು ಜನರು ಯಾರು' ಎಂದೆಲ್ಲ ಪ್ರಶ್ನೆ ಮಾಡುತ್ತಾರೆ.

'ಇತರರ ಮರ್ಜಿಗೆ ತಕ್ಕಂತೆ ನಾವು ಬಾಳಕ್ಕಾಗುತ್ತಾ' ಎಂದು ದೊಡ್ಡ ಮಕ್ಕಳು ಮತ್ತಷ್ಟು ದೊಡ್ಡ ಮಾತನಾಡಿ, 'ಮೇರಿ ಮರ್ಜೀ, ಮೇರೀ ಲೈಫ್' ಎಂದು ಸ್ಟೇಟಸ್ ಹಾಕ್ಕೊಂಡು ಖುಷಿಪಡುತ್ತಾರೆ. ಮೀನಾಕ್ಷಿಯ ಮಗ ಸುಧಾಮ ಒಂಬತ್ತನೇ ತರಗತಿ ವಿದ್ಯಾರ್ಥಿ. ಆಟ–ಪಾಠದ ವಿಷಯಕ್ಕೆ ಬಂದರೆ ಅವನ ಆದ್ಯತೆ ಆಟಕ್ಕೇ ಹೆಚ್ಚು ಅಥವಾ ಮೊಬೈಲ್ ಅನ್ನು ಬಿಡಿಸುವುದು, ಇಯರ್‌ಪಾಡ್‌ಗಳ ಸ್ಪಾಂಜ್‌ಗಳನ್ನು ಒಂದಕ್ಕೊಂದು ಬದಲಾಯಿಸುವುದು..., ಆನ್‌ಲೈನ್‌ನಲ್ಲಿ ಏನಾದರೂ ಹುಡುಕುತ್ತಾ ಕಳೆದುಹೋದಂತೆ ಇದ್ದುಬಿಡುವುದು ಅವನಿಗಿಷ್ಟ. ಓದದೇ ಹೀಗೆ ಹಗರಣ ಮಾಡಿಕೊಂಡಿರುವ ಮಗನಿಗೆ ಅಮ್ಮ ಆಗಾಗ 'ನಾಕು ಜನರು ನಿನ್ನ ನೋಡಿ ನಗುವ ಹಾಗೆ ಮಾಡಬೇಡಾ... ಓದ್ಕೊ ಪುಟ್ಟಾ' ಎನ್ನುವುದುಂಟು. ಆಗೆಲ್ಲ ಸಿಟ್ಟುಮಾಡಿಕೊಳ್ಳುವ ಸುಧಾಮನ ಸ್ಟೇಟಸ್ – 'ಮೇರಿ ಮರ್ಜಿ...' ಎನ್ನುವ ಧಾಟಿಯಲ್ಲಿಯೆ ಇರುತ್ತದೆ. ಸ್ಟೇಟಸ್‌ನಲ್ಲಿ ಆಗಾಗ ಇಂತಹ ಸಂದೇಶಗಳನ್ನು ನೋಡುವ ಮೀನಾಕ್ಷಿ, ನಿನ್ನ ಮರ್ಜಿಯನ್ನೇ ಅನುಸರಿಸು, ಆದರೆ ಅದರಿಂದ ಇತರರಿಗೆ ನೋವಾಗದ ಹಾಗೆ ನೋಡಿಕೊ ಮಾರಾಯ ಎಂದು ಕಿವಿಮಾತು ಹೇಳುತ್ತಾಳೆ. 'ನಾನ್ಯಾರಿಗೆ ನೋವು ಮಾಡಿದೆ?' ಎಂದು ಪ್ರಶ್ನೆಯ ಬಾಣ ತೂರಿ ಬರುವುದೆಂದು ಮೀನಾಕ್ಷಿಗೆ ಗೊತ್ತು. ತಕ್ಷಣ ಉತ್ತರಿಸುತ್ತಾಳೆ: 'ನೀನು ಫೇಲಾದರೆ ನನಗೆ ನೋವಾಗುತ್ತದೆ... ಅದಕ್ಕಾದರೂ ಓದಿಕೊ. ನಾಲ್ಕು ಜನರ ಪೈಕಿ ಮೊದಲನೆಯವಳು ನಾನೇ...' ಎಂದು ವಿವರಿಸುತ್ತಾಳೆ.

ಪ್ರೌಢಶಾಲೆಯ ಶಿಕ್ಷಕಿಯಾಗಿರುವ ಮೀನಾಕ್ಷಿ ಈ ಬುದ್ಧಿಮಾತಿನ ಬಗ್ಗೆ ಬಹಳ ಯೋಚನೆ ಮಾಡಿದ್ದಾಳೆ. ನಾಲ್ಕು ಜನರು ಒಪ್ಪುವಂತೆ ಬಾಳುವುದು ಎಂದರೆ ಅದು ಇತರರಿಗೆ ತೊಂದರೆಯಾಗದಂತೆ, ಸಮಾಜಕ್ಕೆ ಹೊರೆಯಾಗದಂತೆ ಬಾಳುವುದೇ ಆಗಿದೆ. ಅಥವಾ ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ, ಪ್ರಜಾಪ್ರಭುತ್ವದ ಆಶಯವನ್ನೂ ತನ್ನೊಳಗೆ ಅಡಗಿಸಿಕೊಂಡಿರುವ ಮಾತು ಇದಾಗಿದೆ. ದುಡಿದು ಸಂಪಾದಿಸಿ, ಗೃಹ ಕೃತ್ಯಗಳನ್ನು ಸ್ವತಂತ್ರವಾಗಿ ನಿರ್ವಹಿಸಿ ತನ್ನ ಜೀವನವನ್ನು ತಾನು ಕಟ್ಟಿಕೊಳ್ಳುವುದಲ್ಲದೆ, ಮತ್ತೇನಿದೆ ಈ ಮಾತಿನ ಹಿಂದೆ ಎಂದು ಆಗೀಗ ಮಗನೊಡನೆ ವಾದ ಮಾಡಿದ್ದಾಳೆ. ಮಕ್ಕಳೆಷ್ಟೇ ಪ್ರತಿಭಟಿಸಿದರೂ ವರ್ಷಗಳು ಕಳೆಯುತ್ತಿದ್ದಂತೆಯೇ ತಾವಾಗಿಯೇ ಈ ಮಾತನ್ನು ಅರಗಿಸಿಕೊಂಡಿರುತ್ತಾರೆ.

ಹೌದು, ಮಕ್ಕಳು ಸಮಾಜದಲ್ಲಿ ಹಿಮ್ಮುಖವಾಗಿ ಚಲಿಸದೇ, ಸಂಬಂಧಿಕರು, ನೆರೆಹೊರೆಯವರಿಗೆ ತೊಂದರೆ ಕೊಡುವ ವ್ಯಕ್ತಿಗಳಾಗದೇ ಜೀವನ ಸಾಗಿಸುವಂತೆ ಅವರನ್ನು ಸಜ್ಜುಗೊಳಿಸುವ ಹೊಣೆ ಇತ್ತೀಚೆಗಿನ ವರ್ಷಗಳಲ್ಲಿ ಪಾಲಕರದ್ದೇ ಆಗಿದೆ. ಹಿಂದಿನ ಕಾಲದಲ್ಲಿ ಶಾಲೆಯ ಶಿಕ್ಷಕರು, ಶಿಕ್ಷಕಿಯರು ಮಕ್ಕಳ ವೈಯಕ್ತಿಕ ಅಭ್ಯಾಸಗಳನ್ನು ತಿದ್ದುವ ಹೊಣೆಯನ್ನು ತಾವೇ ಸ್ವಯಂಪ್ರೇರಿತರಾಗಿ ವಹಿಸಿಕೊಳ್ಳುತ್ತಿದ್ದರು. ಮಕ್ಕಳ ಒಳಿತಿನ ಬಗ್ಗೆ ಅಧಿಕಾರಯುತವಾಗಿ ಮಾತನಾಡಿ ನಿರ್ಣಯಗಳನ್ನು ಹೇಳುತ್ತಿದ್ದರು. ಅಂತಹ ಸಂದರ್ಭಗಳಲ್ಲಿ ಅವರು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ನಡೆನುಡಿಗಳ ಬಗ್ಗೆ ಸಾಮಾನ್ಯವಾಗಿ ತಿಳಿಹೇಳುವುದಿತ್ತು. ಆದರೆ ಇಂದು ಶಾಲೆಯಲ್ಲಿ ಅಂಕಗಳಿಕೆಗೆ ಆದ್ಯತೆ ಹೆಚ್ಚಾಗಿದೆ. ಶಿಕ್ಷಕರು ಮಕ್ಕಳ ವೈಯಕ್ತಿಕ ನಡವಳಿಕೆಗಳ ಬಗ್ಗೆ ಒಂದು ಹಂತಕ್ಕಿಂತ ಹೆಚ್ಚಿನ ಬೋಧನೆಯನ್ನು ಮಾಡುವ ಅವಕಾಶವಿಲ್ಲ. ಹಾಗಿದ್ದಾಗ ಆ ಜಾಗವನ್ನು ಮನೆಯಲ್ಲಿ ಪೋಷಕರೇ ತುಂಬಬೇಕಾಗುತ್ತದೆ. ಅಂದರೆ ಹೆಚ್ಚಾಗಿ ಈ ಜವಾಬ್ದಾರಿಯೂ ಅಮ್ಮನ ಹೆಗಲನ್ನೆ ಆಶ್ರಯಿಸಿಬಿಡುತ್ತದೆ.

ಅಂದಹಾಗೆ ಈ ರೀತಿಯ ತಿದ್ದುವಿಕೆ ಮತ್ತು ಬೋಧನೆಗಳು ಭಾರತೀಯ ಶೈಲಿಯ ಪಾಲನೆಯಲ್ಲಿಯೇ ಹೆಚ್ಚಾಗಿ ಕಾಣಿಸುವುದು. ಮಕ್ಕಳಿಗೆ ತಲುಪಬೇಕಾದ ಮಾಹಿತಿಗಳ ನಿಯಂತ್ರಣ, ಅಂಕಗಳಿಗಿಂತ ನಡೆನುಡಿಯೆ ಮುಖ್ಯ ಎನ್ನುವ ಆಶಯ, ಒಟ್ಟಾಗಿ ಕುಳಿತು ಊಟ ಮಾಡುವುದಕ್ಕೆ ಆದ್ಯತೆ, ಹಬ್ಬ ಹರಿದಿನಗಳಲ್ಲಿ ಮಕ್ಕಳಿಗೂ ಒಂದಲ್ಲ ಒಂದು ಜವಾಬ್ದಾರಿ ವಹಿಸುವುದು... ಹೀಗೆ ಭಾರತೀಯ ಶೈಲಿಯ ಪಾಲನೆ ಪೋಷಣೆಯಲ್ಲಿ 'ಹತ್ತು ಜನರ ನಡುವೆ ಒಪ್ಪವಾಗಿ ಬದುಕಬೇಕು' ಎಂಬ ಕಿವಿ ಮಾತನ್ನು ಹೇಳಲು ಅನೇಕ ರೀತಿಯ ಅವಕಾಶಗಳು ಸೃಷ್ಟಿಯಾಗುತ್ತವೆ.

ಪ್ರತಿಕ್ರಿಯಿಸಿ: feedback@sudha.co.in